## ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ

**ಸಿ.ಸಿ ಃ 586/2019**

ಸಾಕ್ಷಿದಾರರ ಹೆಸರು ಃ ಗೋಪಿನಾಥ್

ತಂದೆಯ ಹೆಸರು ಃ ಗುಂಡಶೆಟ್ಟಿ

ವಯಸ್ಸು ಃ **66** ವರ್ಷ

ಉದ್ಯೋಗ ಃ ನಿವೃತ್ತ ತಹಶೀಲ್ದಾರ್

ವಾಸಸ್ಥಳ ಃ ಶಿವಮೊಗ್ಗ

ಸಿ.ಡಬ್ಲ್ಯೂ- **10**

ಪಿ.ಡಬ್ಲ್ಯೂ- **8**

ದಿನಾಂಕಃ **03.08.2024** ರಂದು ಪ್ರಮಾಣವಚನ ಬೋಧಿಸಲಾಯಿತು.

### ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ

ನಾನು 2015 ಡಿಸೆಂಬರ್ ರಿಂದ 2018 ಡಿಸೆಂಬರ್ ವರೆಗೆ ನ.ರಾ.ಪುರ ತಾಲ್ಲೂಕಿನಲ್ಲಿ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 08.05.2018 ರಂದು ಜಿಲ್ಲಾಧಿಕಾರಿಗಳ ಆದೇಶದಂತೆ ನಾನು ಚಾಸಾ-1 ರವರನ್ನು ಚಾಸಾ-33 ರವರ ಸ್ವಾಧೀನದಲ್ಲಿದ್ದ ಅಕ್ಕಿಯನ್ನು ಕೆ ಎಸ್ ಎಫ್ ಸಿ ಫುಡ್ ಗೋಡನ್ ಗೆ ಅಕ್ಕಿಯನ್ನು ಸರಂಡರ್ ಮಾಡಲು ಆದೇಶ ಮಾಡಿರುತ್ತೇನೆ. ಸದರಿ ವರದಿಯನ್ನು ನಾನು ಜಿಲ್ಲಾಧಿಕಾರಿಗಳಿಗೆ ದಿನಾಂಕಃ 16.05.2018 ರಂದು ಸಲ್ಲಿಸಿರುತ್ತೇನೆ. ಈ ಸಂಬಂಧ ನಾನು ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ವರದಿಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-18 ಎಂದು ಗುರುತಿಸಲಾಯಿತು.

### ಪಾಟೀ ಸವಾಲು ಆರೋಪಿ ಪರ ಶ್ರೀ.ಕೆ ಎಸ್ ಎಸ್ ವಕೀಲರಿಂದ ಃ

ಕೆ ಎಸ್ ಎಫ್ ಸಿ ಫುಡ್ ಗೋಡನ್ ನ ರಾ ಪುರ ಪೊಲೀಸ್ ಠಾಣೆಯಿಂದ 2 ಕಿ ಮೀ ದೂರದಲ್ಲಿರುತ್ತದೆ ಎಂದರೆ ಸರಿ. ಜಿಲ್ಲಾಧಿಕಾರಿಗಳಿಂದ ಬಂದ ಆದೇಶವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಜಿಲ್ಲಾಧಿಕಾರಿಗಳ

ಆದೇಶದಂತೆ ನಾನು ಖುದ್ದಾಗಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ನಾನು ಜಿಲ್ಲಾಧಿಕಾರಿಗಳ ಆದೇಶದಂತೆ ನಡೆದುಕೊಳ್ಳದೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ 03.08.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾ.ದಂಃ ನ.ರಾ.ಪುರ.

ಸಾಕ್ಷಿ ಸಹಿಃ